ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 02.08.2024.

**<u>ಪಾಟೀ ಸವಾಲು – ಪ್ರತಿವಾದಿ ಪರಃ ವಕೀಲರಿಂದಃ</u>**

ನನ್ನ ಹೆಸರು ಹಸನಸಾಬ್ ಇಮಾಮಸಾಬ್ ಹಿತ್ತಲಮನಿ ಅಂತಾ ಇರುತ್ತದೆ. ಹಸನಸಾಬ್ ದೊಡ್ಡಜಮಾಲಸಾಬ್ ಹಿತ್ತಲಮನಿ ನಾನು ಅಲ್ಲಾ ಎಂದರೆ ಸರಿ. ಈ ದಾವೆಯನ್ನು ಯಾರು ಯಾರ ವಿರುದ್ದ ಏನು ಪರಿಹಾರ ಕೇಳಿ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿದೆ. ದಾವಾ ಆಸ್ತಿ ಎಂದರೆ ನನ್ನ ಕಾಕಾನ ಆಸ್ತಿ ಎಂದು ನುಡಿಯುತ್ತಾರೆ. ಸರ್ವೆ ನಂಬರ 73 ಮತ್ತು 74 ಇರುತ್ತದೆ. ಸದರಿ ದಾವಾ ಆಸ್ತಿ 8 ಎಕರೆ 20 ಗುಂಟೆ ಇರುತ್ತದೆ. ದಾವಾ ಆಸ್ತಿಗೆ ಪೂರ್ವಕ್ಕೆ ಫಕ್ರುಸಾಬ್ ಹಿತ್ತಲಮನಿ, ಪಶ್ಚಿಮಕ್ಕೆ ಇಮಾಮಸಾಬ್ ಹಿತ್ತಲಮನಿ ಇವರ ಜಮೀನು, ದಕ್ಷಿಣಕ್ಕೆ ಎಲಿ ಗಂಗಣ್ಣನವರ ಇವರ ಜಮೀನು, ಉತ್ತರಕ್ಕೆ ಚಿಕ್ಕಪ್ಪ ಛತ್ರದ ಇವರ ಜಮೀನು ನನ್ನ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ ಇಮಾಮಸಾಬ್ ದೊಡ್ಡಜಮಾಲಸಾಬ್ ಹಿತ್ತಲಮನಿ ಇವರು ಜಮೀನನ್ನು ಎಲಿ ಇವರ ಕಡೆಯಿಂದ ಖರೀದಿ ಹಿಡಿದಿರುತ್ತಾರೆ. ಜಮೀನನ್ನು ಇಮಾಮಸಾಬ್, ಫಕ್ರುಸಾಬ ಮತ್ತು ಮರ್ದಾನ ಸಾಬ್ ಈ ಮೂವರು ಖರೀದಿ ಹಿಡಿದಿದ್ದರು ಎಂದರೆ ಸರಿ.

ಸದರಿ ಖರೀದಿ ಪತ್ರ ದಿನಾಂಕಃ 22.06.1962 ರಲ್ಲಿ ಖರೀದಿ ಪತ್ರ ನೋಂದಾಗಿರುತ್ತದೆ ಎಂದರೆ ಸರಿ. ಸದರಿ ಜಮೀನು ಮೊದಲು ಕಲ್ಲಪ್ಪ ಶಿವರುದ್ರಪ್ಪ ಎಲಿ ಮತ್ತು ವಿಶ್ವನಾಥ ಕಲ್ಲಪ್ಪ ಎಲಿ ಇವರ ಜಮೀನು ಎಂದರೆ ಸರಿ. ಸದರಿ ಜಮೀನಿನ ಖರೀದಿ ಪತ್ರವನ್ನು ನೋಡಿರುವುದಿಲ್ಲಾ ಸದರಿ ಖರೀದಿ ಪತ್ರದಲ್ಲಿ ದಾರಿ ಇದ್ದ ಬಗ್ಗೆ ಉಲ್ಲೇಖ ಇರುತ್ತದೆ ಕನ್ನಡ ಓದಲು ಬರೆಯಲು ಬರುವುದಿಲ್ಲಾ. ಕಾರಣ ಕಣ್ಣು ಆಪರೇಶನ್ ಆಗಿರುತ್ತದೆ. ಖರೀದಿ ಪತ್ರದಲ್ಲಿ ದಾರಿ ಇದ್ದ ಬಗ್ಗೆ ಉಲ್ಲೇಖ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ನಂತರ ಖರೀದಿ ಮಾಡಿದ ಜಮೀನು ಹಿಸ್ಸೆಯಲ್ಲಿ ಇಮಾಮಸಾಬ್ ನಿಗೆ ಬಂದಿರುತ್ತದೆ ಎಂದರೆ ಸರಿ. ಸದರಿಯವರು ವಾಟ್ನಿ ಪತ್ರ ಮಾಡಿಕೊಂಡಿರುವುದಿಲ್ಲಾ. ಇಮಾಮಸಾಬ್ ಇವರು 25 ರಿಂದ 30 ವರ್ಷದ ಹಿಂದೆ ಜಮೀನನ್ನು

ಅಣ್ಣಪ್ಪ ಮತ್ತು 1ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿರುತ್ತಾರೆ. ಸದರಿ ಖರೀದಿ ವ್ಯವಹಾರದಲ್ಲಿ ನಾನು ಇದ್ದೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಡಿ-01 ಎಂದು ಸಾಕ್ಷಿ ಸಹಿಯನ್ನು ನಿಡಿ-01(ಎ) ಎಂದು ಗುರುತಿಸಲಾಯಿತು. ನಿಡಿ-01 ರಲ್ಲಿ ದಾರಿಯ ಬಗ್ಗೆ ಉಲ್ಲೇಖ ಇರುವುದಿಲ್ಲಾ ಆದರೆ ನಾವೇ ದಾರಿ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾರಿ ಇದ್ದದ್ದು ನಿಜ ಇದ್ದರೆ ಖರೀದಿ ಪತ್ರದಲ್ಲಿ ಬರೆಯುತ್ತಿದ್ದರು ಎಂದರೆ ಸರಿ.

ದಿಃ 25.05.1998 ರಂದು ನನ್ನ ತಂದೆ ಮತ್ತು ವಾದಿಯ ತಂದೆ ಮಧ್ಯ ಒಂದು ಒಪ್ಪಂದ ಪತ್ರ ಆಗಿರುತ್ತದೆ ಅಂತಾ ನನ್ನ ಪ್ರಮಾಣಪತ್ರದಲ್ಲಿ ಬರೆಸಿದ್ದು ಅದು ಯಾರ ಹತ್ತಿರ ಇದೆ ಅಂತಾ ನನಗೆ ಗೊತ್ತಿಲ್ಲಾ. ಕಾರಣ ಬಹಳ ದಿವಸ ಆಗಿರುವುದರಿಂದ ನನಗೆ ನೆನಪಿಲ್ಲಾ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಒಪ್ಪಂದಪತ್ರದ ದಿನಾಂಕವನ್ನು ಹೇಳಿ ಬರೆಸಿರುತ್ತೇನೆ ನನ್ನ ಪ್ರಮಾಣಪತ್ರದಲ್ಲಿ ಒಪ್ಪಂದಪತ್ರದ ದಿನಾಂಕಃ 26.07.2024 ಅಂತಾ ಬರೆಸಿರುತ್ತೇನೆ. ಖರೀದಿ ಪತ್ರ ಆಗುವ ಪೂರ್ವದಲ್ಲಿ ಒಪ್ಪಂದ ಪತ್ರ ಆಗಿರುತ್ತದೆ. ಖರೀದಿ ಪತ್ರ ಆಗುವ ಎಷ್ಟು ತಿಂಗಳು, ದಿನ, ವರ್ಷದ ಹಿಂದೆ ಆಗಿರುತ್ತದೆ ಅಂತಾ ನನಗೆ ನೆನಪಿಲ್ಲಾ. ಒಪ್ಪಂದ ಪತ್ರ ಆಗಿ ಎಷ್ಟು ದಿನಗಳ ನಂತರ ಖರೀದಿ ಪತ್ರ ಆಗಿರುತ್ತದೆ ನನಗೆ ನೆನಪಿಲ್ಲಾ. ಖರೀದಿ ಆಗುವ ಪುರ್ವದಲ್ಲಿ ಒಪ್ಪಂದ ಪತ್ರ ಆಗಿದ್ದು ನಂತರ ದಾರಿ ಬಗ್ಗೆ ಯ್ಯಾಕೆ ಬರೆಸಿಲ್ಲಾ ಎಂದರೆ ನಾವು ಸಣ್ಣವರಿದ್ದೇವು ಎಂದು ನುಡಿಯುತ್ತಾರೆ. ಖರೀದಿ ಪತ್ರ ಆಗುವಾಗ ನಾನು ಪ್ರಾಪ್ತ ವಯಸ್ಕನಿದ್ದು ಖರೀದಿ ಪತ್ರಕ್ಕೆ ಸಹಿ ಮಾಡಿದ್ದೇನೆ ಅಂದರೆ ಸರಿ. ನಿಡಿ-01 ಕ್ಕೆ ನನ್ನ ಜೊತೆಗೆ ಅಣ್ಣ ತಮ್ಮಂದಿರು ಸಹಿ ಮಾಡಿದ್ದಾರೆ ಎಂದರೆ ಸರಿ. ನಿಡಿ-01 ಆಗುವ ಸಮಯದಲ್ಲಿ ಕಣ್ಣಪ್ಪ ಕೊಪ್ಪದ ಹಾಜರಿದ್ದರು ಎಂದರೆ ಸರಿ. ಕಣ್ಣಪ್ಪ ಕೊಪ್ಪದ ಇವರು 10 ವರ್ಷ ಎ.ಪಿ.ಎಂ.ಸಿ ಚೇರಮನ್ ಮತ್ತು ಟಿ.ಎಂ.ಸಿ ಯಲ್ಲಿ ಚೇರಮನ್ ಇದ್ದರು ಎಂದರೆ ಸರಿ. ಮಾರಾಟವಾದ ಜಮೀನಿನಲ್ಲಿ ಯಾವುದೇ ದಾರಿ ಇಲ್ಲದೇ ಇರುವುದರಿಂದ ನಿಡಿ-01 ರಲ್ಲಿ ನಮೂದಿಲ್ಲಾ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು 20 ವರ್ಷದಿಂದ ನಾನೇ ಹೊಲ ಮಾಡಿದ್ದು ದಾರಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. 20 ವರ್ಷದಿಂದ ನಾನೇ ಹೊಲ

ಮಾಡಿದ್ದು ದಾರಿ ಕೊಟ್ಟಿದ್ದೇನೆ ಎಂದರೆ ನಿಡಿ-01 ರಲ್ಲಿ ಏಕೆ ಬರೆಸಿಲ್ಲಾ ಎಂದರೆ ನಾನು ಸಣ್ಣವನಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರದು ವಾದಿಯ ಜೊತೆಗೆ ಮತ್ತು ನನ್ನ ಜೊತೆಗೆ ಯಾವುದೆ ದ್ವೇಷ ಇರುವುದಿಲ್ಲಾ. ಪ್ರತಿವಾದಿಯರು ವಾದಿಯರ ಬೆಳೆಯನ್ನು ಯಾವ ವರ್ಷದಲ್ಲಿ ಹಾಳು ಮಾಡಿದ್ದಾರೆ ಅಂತಾ ನನಗೆ ನೆನಪಿಲ್ಲಾ.

ನನ್ನ ಪ್ರಮಾಣಪತ್ರದ 7 ನೇ ಪ್ಯಾರಾದಲ್ಲಿ ಬರೆದ ಹಾಗೇ ಯಾವ ತಿಂಗಳು, ದಿನಾಂಕ, ಇಸ್ವಿ ನನಗೆ ನೆನಪಿಲ್ಲಾ. ನಮ್ಮ ತಂದೆ ಜಮೀನನ್ನು ಮಾರಾಟ ಮಾಡಿದ ನಂತರ ಆ ಜಮೀನಕ್ಕೆ ಇಲ್ಲಿಯವರೆಗೆ ಹೋಗುವುದು ಬರುವುದು ಮಾಡಿಲ್ಲಾ ಎಂದರೆ ಸರಿ. ವಾದಿ ಪೊಲೀಸಠಾಣೆಗೆ ಹೋದ ಬಗ್ಗೆ ನನಗೆ ಗೊತ್ತಿಲ್ಲಾ. ನನ್ನ ಪ್ರಮಾಣಪತ್ರದಲ್ಲಿ ವಾದಿ 2018 ರಲ್ಲಿ ಪೊಲೀಸಠಾಣೆಗೆ ಹೋಗಿದ್ದರು ಅವರು ಸಿವಿಲ್ ದಾವೆ ಇದೆ ಅಂತಾ ಹೇಳಿರುತ್ತಾರೆ ಅಂತಾ ನನ್ನ ಪ್ರಮಣಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲಾ. ವಾದಿ ಹಾಜರುಪಡಿಸಿದ ಹಾತ್ ನಕಾಶೆಯಲ್ಲಿ ವಾದಿಯ ಮತ್ತು ಪ್ರತಿವಾದಿಯ ಜಮೀನು ಎಲ್ಲಿ ಇದೆ ಅಂತಾ ಹೇಳಲು ಆಗುವುದಿಲ್ಲಾ ಕಾರಣ ಕಣ್ಣು ಕಾಣಿಸುವುದಿಲ್ಲಾ. ನಿಡಿ-01 ರಲ್ಲಿ ನನ್ನ ಸಹಿ ನೋಡಿ ಗುರುತಿಸಿದ್ದು ಹಾತ್ ನಕಾಶೆ ಗುರುತಿಸುವುದಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ದಾವೆಯ ಅಂಶಗಳ ಬಗ್ಗೆ ಮತ್ತು ವಾದಿ ಮತ್ತು ಪ್ರತಿವಾದಿಗಳ ಬಗ್ಗೆ ಆದ ಸನ್ನಿವೇಶಗಳ ಬಗ್ಗೆ ನನಗೆ ಗೊತ್ತಿಲ್ಲಾ ಎಂದರೆ ಸರಿಯಲಾ. ವಾದಿ ನನ್ನ ಕಕ್ಕನ ಮಗಳು ಇರುತ್ತಾಳೆ. ವಾದಿಗೆ ಅನುಕೂಾಲ ಮಾಡಿಕೊಡಲು ದಾವಾಆಸ್ತಿಯಲ್ಲಿ ದಾರಿ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ವಾದಿಗೆ ಅನುಕೂಲ ಮಾಡಿಕೊಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.